ದಿನಾಂಕ :06–04–2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**(ಸಾಕ್ಷಿಯನ್ನು ವಿಡಿಯೋ ಕಾನ್ಪರೆನ್ಸ ಮುಖಾಂತರ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಾವು ಕಾರ್ಯನಿರ್ವಹಿಸುತ್ತಿರುವ ಬೆಂಗಳೂರಿನ ಕಚೇರಿಯಿಂದ ತಮ್ಮ ಮೊಬೈಲ್ ಆಪ್ ನಿಂದ ನ್ಯಾಯಾಲಯದ ಗೂಗಲ್ ಮೀಟ್ ಆ್ಯಪ್ ಮೂಲಕ ವಿಚಾರಣೆಗೆ ಹಾಜರಾಗಿರುತ್ತಾರೆ. ಕೋಆರ್ಡಿನೇಟರ ಆಗಿ ಪಿ.ಸಿ. ನಂ. 22826 ಶ್ರೀ ಚೇತನ ರವರು ಹಾಜರಾಗಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಸಾಕ್ಷಿಯಿಂದ ಖಾತರಿಪಡಿಸಿಕೊಂಡು ನ್ಯಾಯಾಲಯದ ಪ್ರಥಮ ದರ್ಜೆ ಸಹಾಯಕರಾದ ಶ್ರೀ.ಎಸ್.ಎಲ್.ದೇವರಮನಿ ರವರನ್ನು ಕೋಆರ್ಡಿನೇಟರ ಆಗಿ ನೇಮಿಸಿಕೊಂಡು ಆರೋಪಿ ಪರ ವಕೀಲರು ಹಾಗೂ ಸರ್ಕಾರಿ ವಕೀಲರ ಉಪಸ್ಥಿತಿಯಲ್ಲಿ ತೆರೆದ ನ್ಯಾಯಾಲಯದಲ್ಲಿ ವಿಚಾರಣೆಯನ್ನು ವಿಡಿಯೋ ಕಾನ್ಪರೆನ್ಸ ಮುಖಾಂತರ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಮ್ಮ ಹತ್ತಿರ ಈ ಪ್ರಕರಣದ ಕಡತವು ಇರುವುದಾಗಿ ನುಡಿಯುತ್ತಾರೆ.)**

## ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ

8. 1ನೇ ಮತ್ತು 2ನೇ ಆರೋಪಿತರು ನಿಪ್ಪಾಣಿಯ ವಾಟ್‌ಗಲ್ಲಿಗೆ ಹೋಗಿರುತ್ತಾರೆ. ನಂತರ 2ನೇ ಆರೋಪಿಯು 3ನೇ ಆರೋಪಿಯ ಮನೆಗೆ ಹೋಗಿ, 3ನೇ ಆರೋಪಿಯನ್ನು ಕರೆದುಕೊಂಡು ಪುನಃ ವಾಟ್‌ಗಲ್ಲಿಗೆ ಬಂದು, 1ನೇ ಮತ್ತು 2ನೇ ಆರೋಪಿತರು ತಾವು ಅರವಿಂದ ಪೋಳ ರವರ ಕೊಲೆ ಮಾಡಿದ್ದ ಶವವನ್ನು ಬೇರೆ ಕಡೆಗೆ ಸಾಗಿಸಲು ಅವರಿಗೆ ಸಹಾಯ ಮಾಡುವಂತೆ ಕೇಳಿದ್ದರು ಎಂದು, ನಂತರ ಆತನು ಒಪ್ಪಿಕೊಂಡಿದ್ದು, ನಂತರ 1ನೇ ಆರೋಪಿಯ ಸ್ನೇಹಿತ ಸುಶಾಂತ ಮಾರುತಿ ಸೂರ್ಯವಂಶಿ ಇವರನ್ನು ಮೂರು ಜನ ಆರೋಪಿತರು ಭೇಟಿ ಮಾಡಿ, ಆತನನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಮತ್ತು ತಮ್ಮ ಮತ್ತೊಬ್ಬ ಸ್ನೇಹಿತ ವಾಟ್‌ಗಲ್ಲಿಯಲ್ಲಿರುವ ಶುಭಂ ಶೆಟ್ಟಿಗೆ ಅವರ ಮನೆಗೆ ಹೋಗಿ, ತಾವು ನಾಲ್ಕು ಜನರು ಕೊಲ್ಲಾಪೂರಕ್ಕೆ

ಹೋಗಬೇಕಾಗಿದೆ ಎಂದು, ತಮ್ಮ Swift Desire ಕಾರು ಬಾಡಿಗೆಗೆ ಕೊಡುವಂತೆ ಕೇಳಿ, ಬಾಡಿಗೆಗೆ ತೆಗೆದುಕೊಂಡು, ನಾಲ್ಕು ಜನರು ಕಾರಿನಲ್ಲಿ ಹೊರಟಿದ್ದು, ಆ ನಂತರ 1, 2 ಮತ್ತು 3ನೇ ಆರೋಪಿತರು ಸುಶಾಂತ ಸೂರ್ಯುವಂಶಿ ರವರಿಗೆ ಕೊಲೆ ವಿಚಾರವನ್ನು ತಿಳಿಸದೇ ಅವರನ್ನು ಅವರ ಮನೆಯ ಬಳಿ ಬಿಟ್ಟು ತಾವು ಮೂರು ಜನರು ಮಾತ್ರ ಪ್ರಯಾಣವನ್ನು ಮುಂದುವರೆಯಿಸಿ, ತಾವು ಕೊಲೆ ಮಾಡಿದ್ದ ಸ್ಥಳವಾದ ಪಾಂಗೇರಿ ಗ್ರಾಮದಲ್ಲಿನ 1ನೇ ಆರೋಪಿಯ ಮನೆ ಇದ್ದ ಪಾಂಗೇರಿ ಗ್ರಾಮಕ್ಕೆ ಹೋಗಿ, ಅಲ್ಲಿ ರಾತ್ರಿ 11:45 ರ ನಂತರ ಕೊಲೆ ಆದ ಅರವಿಂದ ಪೋಳ ರವರ ಮೃತ ದೇಹವನ್ನು ಒಂದು ಕವದಿಯಲ್ಲಿ ಸುತ್ತಿ, ಮುಖದ ಭಾಗವನ್ನು ಪ್ಲಾಸ್ಟಿಕ್ ಚೀಲದಿಂದ ಸುತ್ತಿ, ತಾವು ತಂದಿದ್ದ Swift Desire ಕಾರಿನ ಡಿಕ್ಕಿಯಲ್ಲಿ ಶವವನ್ನು ಇರಿಸಿಕೊಂಡು, ಅಜ್ಜಿಯ ಮನೆಯಲ್ಲಿ ಚಾಪೆ, ಬೀಯರ್ ಬಾಟಲಿ, ಮೃತನ ಮೈ ಮೇಲೆ ಇದ್ದ ರಕ್ತ ಹತ್ತಿದ ಶರ್ಟ್, ಬನಿಯನ್ ಮತ್ತು ನಿಕ್ಕರ ಇವುಗಳನ್ನು ಒಂದು ಪ್ಲಾಸ್ಟಿಕ್ ಚೀಲದಲ್ಲಿ ಸುತ್ತಿ ಅವುಗಳನ್ನು ಸಹ ಕಾರಿನಲ್ಲಿ ಇರಿಸಿಕೊಂಡು, 1ನೇ ಆರೋಪಿ ಕಾರನ್ನು ಚಲಾಯಿಸಿಕೊಂಡು ನಿಪ್ಪಾಣಿ ಕಡೆಗೆ ಹೋಗುವಾಗ, ಜತ್ರಾಟ – ಅಕ್ಕೋಳ ರಸ್ತೆಯಲ್ಲಿ ಡಿಕ್ಕಿಯಲ್ಲಿ ಇರಿಸಿಕೊಂಡಿದ್ದ ಪ್ಲಾಸ್ಟಿಕ ಚೀಲದಲ್ಲಿ ಇರಿಸಿದ್ದ ಪ್ಲಾಸಿಕ್ ಚಾಪೆ, ಮೃತನ ಬಟ್ಟೆಗಳು ಮತ್ತು ಬೀಯರ್ ಬಾಟಲಗಳನ್ನು ರಸ್ತೆಯ ಬದಿಯಲ್ಲಿ ಬಿಸಾಡಿದ್ದರು, ಹಾಗೂ ಶವವನ್ನು ನಾಗನೂರ ಗ್ರಾಮದ ಹದ್ದಿಯಲ್ಲಿರುವ ನೀರಿನ ಕಣಿವೆಯಲ್ಲಿ ಶವವನ್ನು ಬಿಸಾಡಿ, ಅದೇ ಕಾರಿನಲ್ಲಿ ಮೂರು ಜನ ಆರೋಪಿತರು ನಿಪ್ಪಾಣಿಗೆ ಹೋಗಿ , ತಮ್ಮ ಮನೆಗಳಿಗೆ ಹೋಗಿರುತ್ತಾರೆ.

**ಈ ಹಂತದಲ್ಲಿ ನ್ಯಾಯಾಲಯದ ಮುಂಜಾನೆ ಅವಧಿ ಮುಗಿದಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನದ ಅವಧಿಗೆ ಕಾಯ್ದಿರಿಸಲಾಯಿತು.**

**ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**(ಸಾಕ್ಷಿಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಾವು ಕಾರ್ಯನಿರ್ವಹಿಸುತ್ತಿರುವ ಬೆಂಗಳೂರಿನ ಕಚೇರಿಯಿಂದ ತಮ್ಮ ಮೊಬೈಲ್ ಆಪ್ ನಿಂದ ನ್ಯಾಯಾಲಯದ ಗೂಗಲ್ ಮೀಟ್ ಆ್ಯಪ್ ಮೂಲಕ ವಿಚಾರಣೆಗೆ ಹಾಜರಾಗಿರುತ್ತಾರೆ. ಕೋಆರ್ಡಿನೇಟರ ಆಗಿ ಪಿ.ಸಿ. ನಂ. 22826 ಶ್ರೀ ಚೇತನ ರವರು ಹಾಜರಾಗಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಸಾಕ್ಷಿಯಿಂದ ಖಾತರಿಪಡಿಸಿಕೊಂಡು ನ್ಯಾಯಾಲಯದ ಪ್ರಥಮ ದರ್ಜೆ ಸಹಾಯಕರಾದ ಶ್ರೀ.ಎಸ್.ಎಲ್.ದೇವರಮನಿ ರವರನ್ನು ಕೋಆರ್ಡಿನೇಟರ ಆಗಿ ನೇಮಿಸಿಕೊಂಡು ಆರೋಪಿ ಪರ ವಕೀಲರು ಹಾಗೂ ಸರ್ಕಾರಿ ವಕೀಲರ ಉಪಸ್ಥಿತಿಯಲ್ಲಿ ತೆರೆದ ನ್ಯಾಯಾಲಯದಲ್ಲಿ ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಮ್ಮ ಹತ್ತಿರ ಈ ಪ್ರಕರಣದ ಕಡತವು ಇರುವುದಾಗಿ ನುಡಿಯುತ್ತಾರೆ.)**

**ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

9. 1ನೇ ಆರೋಪಿಯು " ನನಗೆ ಕರೆದುಕೊಂಡು ಹೋದರೆ ನಾನು ಅರವಿಂದ ಇವನಿಗೆ ಕೊಲೆ ಮಾಡಲು ಸಂಚು ಮಾಡಿದ ಸ್ಥಳ , ಕೊಲೆ ಮಾಡಿದ ಸ್ಥಳ, ಆಯುಧ ಮತ್ತು ಅವನ ಶವವನ್ನು ಒಗೆದ ಸ್ಥಳ, ಚಾಪೆ, ಬಿಯರ್ ಬಾಟಲಿ, ಮೃತನ ರಕ್ತವನ್ನು ಒಂದು ಪ್ಲಾಸ್ಟಿಕ ಚೀಲದಲ್ಲಿ ಕಟ್ಟಿಕೊಂಡಿದ್ದನ್ನು ಮತ್ತು ಮೃತನ ರಕ್ತ ಹತ್ತಿದ ಶರ್ಟ, ಬನಿಯನ್, ನಿಕ್ಕರಗಳನ್ನು ಒಗೆದ ಸ್ಥಳ, ಸ್ಕೂಟರ ಬಿಟ್ಟ ಸ್ಥಳ, ಅವನ ಸ್ಕೂಟರ ಮತ್ತು ಶವ ಸಾಗಿಸಿದ

ಕಾರನ್ನು ತೋರಿಸುತ್ತೇನೆ ಮತ್ತು ಕೊಲೆ ಮಾಡುವ ಕಾಲಕ್ಕೆ ನನ್ನ ಮೈಮೇಲಿದ್ದ ಬಟ್ಟೆಗಳನ್ನು ತೋರಿಸಿ ಹಾಜರುಮಾಡುತ್ತೇನೆ ಎಂದು ಹೇಳಿಕೆ ನೀಡಿರುತ್ತಾನೆ ". ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-62 ಎಂದು ಗುರುತಿಸಲಾಯಿತು.

10. ಈ ಹೇಳಿಕೆಯ ಪ್ರಕಾರ ಪಂಚಸಾಕ್ಷಿದಾರರಾದ ಚಾಸಾಃ 2 ಫ್ರಾಸಾಃ 3 ಪ್ರಮೋದ, ಚಾಸಾಃ 3 ಫ್ರಾಸಾಃ 4 ಮಹೇಶ ಇವರುಗಳನ್ನು ಪೋಲಿಸ ಠಾಣೆಗೆ ಕರೆಸಿಕೊಂಡಿದ್ದು, 1ನೇ ಆರೋಪಿಯ ಮಾಹಿತಿಯಂತೆ ಶವ ಬಿಸಾಡಿದ ಸ್ಥಳ ನಾಗನೂರು ಗ್ರಾಮದ ಹದ್ದಿಯಲ್ಲಿರುವ ನೀರಿನ ಕಣಿವೆಯಲ್ಲಿ ಸಂಜೆ 6:15 ರಿಂದ 7:00 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿದ್ದೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ-10 ಎಂದು ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-10 [ಸಿ] ಎಂದು ಗುರುತಿಸಲಾಯಿತು. ಪಂಚನಾಮೆ ಮಾಡಿದ ಸ್ಥಳದಲ್ಲಿ ಸ್ಥಳ ರಕ್ಷಣೆಗಾಗಿ ಸಿಬ್ಬಂದಿಯವರನ್ನು ನೇಮಿಸಿದ್ದೇನೆ.

11. ನಿಪಿ-10 ರ ಸ್ಥಳ ಪಂಚನಾಮೆ ಸಮಯದಲ್ಲಿ ನಾವು ಯಾವುದೇ ವಸ್ತುವನ್ನು ಜಪ್ತು ಮಾಡಿಕೊಂಡಿರುವುದಿಲ್ಲ, ಆದರೆ ಸ್ಥಳ ಮಾತ್ರ ಗುರುತಿಸಿದ್ದೇನೆ. ನನ್ನ ನಿರ್ದೇಶನದಂತೆ ಚಾಸಾಃ 32 ಫ್ರಾಸಾಃ 18 ರವರಿಗೆ ಪ್ರಕರಣದ 2 ಮತ್ತು 3ನೇ ಆರೋಪಿತರನ್ನು ಪತ್ತೆ ಮಾಡುವಂತೆ ನಿರ್ದೇಶನ ನೀಡಿದ್ದು, ಅದರಂತೆ ಅವರು ಚಾಸಾಃ 32 ರವರು 2 ಮತ್ತು 3ನೇ ಆರೋಪಿತರನ್ನು ವಶಕ್ಕೆ ಪಡೆದುಕೊಂಡು ನನ್ನ ಮುಂದೆ ಹಾಜರುಮಾಡಿದ್ದರು. ನಾನು ಅವರನ್ನು ವಿಚಾರಣೆ ಮಾಡಿ ದಸ್ತಗಿರಿ ಮಾಡಿದ್ದೇನೆ.

ಈ ಹಂತದಲ್ಲಿ ತಾಂತ್ರಿಕ ದೋಷ ಉಂಟಾಗಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಗಾಗಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.